**ಕರ್ನಾಟಕ ಸರ್ಕಾರ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಆಯುರ್ವೇದ / ಯುನಾನಿ / ಹೋಮಿಯೋಪತಿ ಪದವಿ ಕೋರ್ಸುಗಳ ಸೀಟು ಹಂಚಿಕೆ – 2020**

2020–21ನೇ ಸಾಲಿನ ಆಯುರ್ವೇದ, ಹೋಮಿಯೋಪತಿ, ಯುನಾನಿ ಕೋರ್ಸುಗಳ ಪ್ರವೇಶಾತಿಗೆ UGNEET-2020 ರಲ್ಲಿ ಅರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಪ್ರಾಧಿಕಾರವು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆ ಮಾಡಿಕೊಂಡಿರುವವರು ಮತ್ತೊಮ್ಮೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. ಆದರೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸದೆ ಇರುವವರು ಅಥವಾ ದಾಖಲಾತಿ ಪರಿಶೀಲನೆಯನ್ನು ಮಾಡಿಕೊಳ್ಳದೇ ಇರುವ ಅರ್ಹ ಕರ್ನಾಟಕ ಅಭ್ಯರ್ಥಿಗಳು ಆಯುಷ್ ಕೋರ್ಸುಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.

2020–21 ನೇ ಸಾಲಿಗೆ ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳಿಗೆ ಸರ್ಕಾರವು ನೀಡಿದ ಸೀಟ್ ಮ್ಯಾಟ್ರಿಕ್ಸ್ ಅನ್ವಯ ಮತ್ತು ಆದೇಶದಂತೆ ಸದರಿ ಸೀಟುಗಳನ್ನು ಈ ಕೆಳಗಿನ ವೇಳಾಪಟ್ಟಿಯಂತೆ ಯುಜಿನೀಟ್ – 2020 ರ ಅರ್ಹ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. ಕಾಲೇಜುವಾರು, ಪ್ರವರ್ಗವಾರು ಮತ್ತು ಕೋರ್ಸುವಾರು ಲಭ್ಯವಿರುವ ಸೀಟುಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಯುಜಿನೀಟ್ – 2020 ರ ಅರ್ಹ ಅಭ್ಯರ್ಥಿಗಳು ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ಅಭ್ಯಸಿಸಿರಬೇಕು ಹಾಗು ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಐಚ್ಛಿಕ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%). ಇಚ್ಛೆ ಇರುವ ಅಭ್ಯರ್ಥಿಗಳು ನೊಂದಣಿ ಮಾಡುವ ಮೂಲಕ ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ. (ನೊಂದಣಿ ವಿಧಾನವನ್ನು ಕೆಳಗೆ ವಿವರಿಸಲಾಗಿದೆ.)

ಕೇಂದ್ರ ಸರ್ಕಾರವು ನೀಟ್ 2020 ರ ಆಯುಷ್ ಕೋರ್ಸುಗಳಿಗೆ ನಿಗದಿಪಡಿಸಲಾದ ನೀಟ್ ಪರ್ಸಂಟೈಲ್ ಅನ್ನು ಸಡಿಲಗೊಳಿಸಿರುವ ಕಾರಣದಿಂದ ಆಯುಷ್ ಕೋರ್ಸುಗಳಿಗೆ ಅರ್ಹತೆಯನ್ನು ಪಡೆಯುವ ಅಭ್ಯರ್ಥಿಗಳು ಇಲ್ಲಿಯವರೆಗೆ ಪ್ರಾಧಿಕಾರದಲ್ಲಿ ಅರ್ಜಿಯನ್ನು ಸಲ್ಲಿಸದೇ ಇರುವ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗು ಶುಲ್ಕ ಪಾವತಿಸಿ, ಎಲ್ಲಾ ದಾಖಲೆಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಬಹುದಾಗಿದೆ. (ನೀಟ್ ಪರ್ಸಂಟೈಲ್ ಅನ್ನು ಸಡಿಲಗೊಳಿಸಿರುವ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.)

ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಪತ್ರ ಸಂಖ್ಯೆ L-11011/2/2020-E-P(1) Part-2 ದಿನಾಂಕ 10–12–2020 ರ ಅನ್ವಯ ಖಾಸಗಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕಾಲೇಜುಗಳಲ್ಲಿ 15% ಅಖಿಲ ಭಾರತ ಕೋಟದ ಸೀಟುಗಳನ್ನೂ ಸಹ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಮೆರಿಟ್ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. ಸದರಿ ಸೀಟುಗಳು ಮುಕ್ತ ಸೀಟುಗಳಾಗಿರುತ್ತದೆ. ಅರ್ಹ ಯುಜಿನೀಟ್–2020 ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಸೂಚನೆ:

1. ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದವರು ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
2. ಸಿಇಟಿ–2006 ನಿಯಮಗಳ ಅನ್ವಯ ಇತರೆ ವೃತ್ತಿಪರ ಕೋರ್ಸುಗಳಿಗೆ ಕಾಲೇಜುಗಳಲ್ಲಿ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ, ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳ ಪ್ರವೇಶಾತಿಯ ಅರ್ಹತೆಯು Karnataka Selection of Candidates for Admission to Government Seats in Professional Educational Institutions (Amendment) Rules, 2020 ರ ನಿಯಮಗಳಿಗೆ ಒಳಪಟ್ಟಿರುತ್ತದೆ.

ಕ್ರಮಗಳು:

- ✓ ನೀಟ್ ರೋಲ್ ನಂಬರ್ ಅನ್ನು ನಮೂದಿಸಿ, ಇಂಜಿನಿಯರಿಂಗ್, ಕೃಷಿ ವಿಜ್ಞಾನ ಇತರೆ ಕೋರ್ಸಿಗೆ / ಅಥವಾ ವೈದ್ಯಕೀಯ / ದಂತವೈದ್ಯಕೀಯ ಕೋರ್ಸಿಗೆ ದಾಖಲಾತಿ ಪರಿಶೀಲನೆ ಮಾಡಿಕೊಂಡಿರುವವರು ಆಯುಷ್ ಕೋರ್ಸುಗಳಿಗೆ ಮತ್ತೊಮ್ಮೆ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಗತ್ಯವಿರುವುದಿಲ್ಲ.
- ✓ ನೀಟ್ ರೋಲ್ ನಂಬರ್ ನಮೂದಾಗಿರುವ Verification Slip ಅನ್ನು ಡೌನ್‌ಲೋಡ್ ಮಾಡಿಕೊಂಡಿರುವವರೂ ಸಹ ಮತ್ತೊಮ್ಮೆ ಡೌನ್‌ಲೋಡ್ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ. Verification Slip ಅನ್ನು ಡೌನ್‌ಲೋಡ್ ಮಾಡಿಕೊಳ್ಳದಿರುವ ಅಭ್ಯರ್ಥಿಗಳು ಮಾತ್ರ ಆಯುಷ್ ಕೋರ್ಸುಗಳಿಗೆ ಡೌನ್‌ಲೋಡ್ ಮಾಡಿಕೊಳ್ಳಬೇಕು.
- ✓ ಹೊಸದಾಗಿ ಅರ್ಜಿಯನ್ನು ನೊಂದಣಿ ಮಾಡುತ್ತಿರವವರು ನೀಟ್ ಸ್ಕೋರ್ ಕಾರ್ಡ್ ಹಾಗು ಇತರೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಆಯುಷ್ ಕೋರ್ಸುಗಳ ಪ್ರವೇಶಾತಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.
- ✓ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ನೀಟ್ ರೋಲ್ ನಂಬರ್ ಅನ್ನು ದಾಖಲಿಸದೇ ಇರುವವರು, ನೀಟ್ ರೋಲ್ ನಂಬರ್ ಅನ್ನು ದಾಖಲಿಸಿ, ನೀಟ್ ಸ್ಕೋರ್ ಕಾರ್ಡ್ ಹಾಗು ಇತರೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಆಯುಷ್ ಕೋರ್ಸುಗಳ ಪ್ರವೇಶಾತಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.
- ✓ ನೀಟ್ ರೋಲ್ ನಂಬರ್ ಅನ್ನು ನಮೂದಿಸಿ ದಾಖಲಾತಿ ಪರಿಶೀಲನೆಯನ್ನು ಮಾಡಿಕೊಳ್ಳದೇ ಇರುವ ಅರ್ಹ ಕರ್ನಾಟಕ ಅಭ್ಯರ್ಥಿಗಳು ನೀಟ್ ಸ್ಕೋರ್ ಕಾರ್ಡ್ ಹಾಗು ಇತರೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಆಯುಷ್ ಕೋರ್ಸುಗಳ ಪ್ರವೇಶಾತಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.

ನೊಂದಣಿ, ದಾಖಲಾತಿ ಪರಿಶೀಲನೆ, ಸೀಟು ಹಂಚಿಕೆ ಇನ್ನಿತರ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳ ಮಾಹಿತಿಗಾಗಿ ನೀಡಲಾಗಿದೆ.

ಸಹಿ/–

ದಿನಾಂಕ: 25–01–2021

ಕಾರ್ಯನಿರ್ವಾಹಕ ನಿರ್ದೇಶಕರು

Karnataka Examinations Authority

Schedule for Admission to Ayurveda, Unani, Homoeopathy degree courses – 2020

| Sl. No. | Particulars | Date and Timings |
|---|---|---|
| 01 | Registration only for new candidates<br>ನೊಂದಣಿ ಮಾಡುವುದು – ಹೊಸ ಅಭ್ಯರ್ಥಿಗಳಿಗೆ ಮಾತ್ರ | From 11.00 am on 28-01-2021 to 01-02-2021upto 5.30 pm |
| 02 | Online uploading of documents to outside Karnataka candidates<br>ಕರ್ನಾಟಕದ ಹೊರಗಿನ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು | From 2.00 pm on 01-02-2021 to 03-02-2021 up to 4.00 pm |
| 03 | Offline verification of documents to Karnataka candidates<br>ಕರ್ನಾಟಕದಲ್ಲಿನ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗುವುದು | 02-02-2021 to 04-02-2021<br>(Rank wise schedule will be hosted on KEA Website on 30-01-2021) |
| 04 | Display of seat matrix<br>ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆ | 01-02-2021 |
| 05 | Publication of provisional verified list of newly uploaded candidates (sl. no.2) | 04-02-2021 after 6.00 pm |
| 06 | Uploading of insufficient documents if any (sl. no.2) | From 2.00 pm 04-02-2021 to 05-02-2021 up to 2.00 pm |
| 07 | Downloading of verification slip | After 5.00 pm on 05-02-2021 |
| 08 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ)<br>Entry of options | From 2.00 pm on 06-02-2021 To 08-02-2021 Up to 11.00 am |
| 09 | ಅಣುಕು ಸೀಟು ಹಂಚಿಕೆಯ ಫಲಿತಾಂಶ<br>Mock seat allotment results | 09-02-2021 after 2.00 pm |
| 10 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಅಭ್ಯರ್ಥಿಗಳು ಅಣುಕು ಸೀಟು ಹಂಚಿಕೆಯ ಫಲಿಂತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ.)<br>(After verifying the Mock Allotment results, candidates are free to change, reorder, delete and add to their choices of courses / colleges as per their preference.) | From 4.00 pm 09-02-2021 To 10-02-2021 upto 11.00 am |
| 11 | ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ<br>Publication of first round allotment Result | 11-02-2021 after 4.00 pm |
| 12 | ಪೋಷಕರ ಜೊತೆ ಚರ್ಚಿಸಿ ಸೂಕ್ತವಾದ CHOICE ಅನ್ನು ಆಯ್ಕೆ ಮಾಡಿಕೊಳ್ಳಲು<br>Exercising Choices by the seat allotted candidates in consultation with their parents | 12-02-2021 to 14-02-2021 |
| 13 | Choice 1 ಆಯ್ಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು<br>Payment of fees by Choice 1 Candidates | 12-02-2021 to 15-02-2021 |
| 14 | ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ (ಎಲ್ಲಾ ಮೂಲ ದಾಖಲಾತಿಗಳೊಂದಿಗೆ – Verification slip ನಲ್ಲಿ ನಮೂದಿಸಿರುವಂತೆ)<br>Last Date for Reporting at the Allotted Colleges (Choice -1 Candidates Only) along with all the originals as per Verification slip | 16-02-2021 before 5.30 pm |

Date: 25-01-2021

Sd/-
Executive Director.